


ಆದರೆ ಧರ್ಮಪ್ರಸಾದನ ಆ ಯೋಚನೆ ಸುಳ್ಳೆನಿಸುವಂತೆ ಕೋಳಿಗಳ ಕಿರಿಚಾಟ ಸ್ವಲ್ಪ ಹೊತ್ತಿನಲ್ಲಿ ನಿಲ್ಲುವ ಬದಲು ಇನ್ನೂ ಜೋರಾಗುತ್ತಲೇ ಇದೆ! ಅಷ್ಟೇ ಅಲ್ಲ; ಇನ್ನೂ ಸೋಜಿಗವೆಂಬಂತೆ, ಪಂಜರದ ಇಕ್ಕಟ್ಟಾದ ಆ ಜಾಗೆಯಲ್ಲೇ ಅವು ಒಂದರ ಮೇಲೊಂದರಂತೆ ಎಗರಿ, ಕುಕ್ಕಿ, ತೆವಳಿ, ಪ್ರತಿಯೊಂದೂ ಹಿಂದಕ್ಕೆ, ಹಿಂದಕ್ಕೆ, ಸರಿಯಲು ಯತ್ನಿಸುತ್ತಿದ್ದವು. ಸರಕಾರದ ಅನುಕೂಲತೆಗಳನ್ನು ಪಡೆಯಲು ಕೆಲವು ಅನರ್ಹ ನಾಗರಿಕರು ತಮ್ಮನ್ನೂ ಹಿಂದುಳಿದವರೆಂದು ಸಾರಲು ಹೋರಾಡುವ ರೀತಿಯಲ್ಲೇ ಇತ್ತು ಅವುಗಳ ವರ್ತನೆ! ಕೋಳಿಗಳ ಆ ವಿಚಿತ್ರ ಸಾಹಚರ್ಯೆ ಮತ್ತು ವಿಭಿನ್ನ ಕೀರಲು ದನಿ ಮಾಲೀಕನಿಗೆ ಅಚ್ಚರಿಗಿಂತ ಹೆಚ್ಚಾಗಿ ದಿಗಿಲು ಹುಟ್ಟಿಸಿತು. ಆತ ಪ್ರತಿಸಲದಂತೆ ಇವತ್ತು ಮಾತ್ರ ಬೇಗ ಮರಳಿ ಹೋಗಲು ಅವಸರಿಸದೆ, ಎಲ್ಲ ಪಂಜರಗಳನ್ನೂ ಸುತ್ತುಹೊಡೆದು ಗಮನಿಸತೊಡಗಿದ. ಕೋಳಿಗಳ ಬದಲಾದ ಆ ನಡೆ ಧರ್ಮಪ್ರಸಾದನನ್ನು ವಿಚಲಿತಗೊಳಿಸಿತ್ತಷ್ಟೇ ಅಲ್ಲ, ಅವನಿಗೆ ತನ್ನ ಕಿವಿಗಳೇ ಮಂದವಾಗುವಂಥ ಅನುಭವವಾಗತೊಡಗಿತು!

ಯಾಂತ್ರೀಕೃತ ವ್ಯವಸ್ಥೆಯಲ್ಲಿ ಕೋಳಿಗಳ ತಲೆಗಳನ್ನು ಕತ್ತರಿಸಿ, ಚರ್ಮ ಸುಲಿದು ತೂಗುಹಾಕಲು ರೆಡೀ ಮಾಡುತ್ತಿದ್ದ ನೌಕರರೂ ಕೋಳಿಗಳ ಈ ಸದ್ದು ಕೇಳಿ ಕುತೂಹಲದಿಂದ ಹೊರಗೆ ಓಡಿ ಬರುತ್ತಾರೆ. ಆ ಹೊಸ ವಿದ್ಯಮಾನವನ್ನು ಗಮನಿಸಿದ ಅವರಿಗೂ ಎಲ್ಲಿಲ್ಲದ ಗಾಬರಿ! ಇದೆಲ್ಲ ನಡೆಯುತ್ತಿದ್ದಂತೆಯೇ ಆ ಕೋಳಿಗಳು ಇನ್ನೂ ಸೋಜಿಗ ತರಿಸುವ ಮತ್ತೊಂದು ವಿಚಿತ್ರ ವರ್ತನೆಯನ್ನು ಸುರೂ ಮಾಡಿಬಿಟ್ಟವು! ಊಹಿಸಲೂ ಸಾಧ್ಯವಾಗದ ಆ ದೃಶ್ಯ ಅವರೆಲ್ಲರ ಕಣ್ಣೆಗೇ ರಾಚತೊಡಗುತ್ತದೆ. ನಂಬಲು ಸಾಧ್ಯವಾಗದ ರೀತಿಯಲ್ಲಿ ಪಂಜರದೊಳಗಿದ್ದ ಕೋಳಿಗಳೆಲ್ಲ ಒಂದನ್ನು ಮತ್ತೊಂದು ಮುಂದಕ್ಕೆ ಮುಂದಕ್ಕೆ ತಳ್ಳುವ ಸಾಹಸದಲ್ಲಿ ನಿರತವಾಗಿವೆ! ಹಾಗೆ ಮಾಡುತ್ತಿದ್ದ ಪ್ರತಿಯೊಂದು ಕೋಳಿಯೂ ತಾನು ಆದಷ್ಟು ಹಿಂದೆ ಹೋಗಬೇಕೆಂಬ ಹೋರಾಟಕ್ಕೆ ಅಣಿಯಾದಂತಿತ್ತು. ಅಷ್ಟೇ ಅವು ಭಯಗ್ರಸ್ಥ ಕೂಡ ಆಗಿದ್ದವು. ಆ ತಳ್ಳಾಟ ಎಷ್ಟೊಂದು ವೇಗವಾಗಿತ್ತೆಂದರೆ, ಯಾವ ಕೋಳಿ ಎಲ್ಲಿದೆ ಅನ್ನೋದನ್ನು ಗುರುತಿಸಲೂ ಸಾಧ್ಯವಾಗುವಂತಿರಲಿಲ್ಲ.

ಕೋಳಿಗಳ ಈ ಬಗೆಯ ವರ್ತನೆ ಕಳೆದ ಕೆಲವು ದಿನಗಳಿಂದ ನಿಧಾನವಾಗಿ ಸುರೂವಾಗಿತ್ತಾದರೂ, ಚಿಕನ್ ಸೆಂಟರ್‌ನ ನೌಕರರಾಗಲಿ, ಮಾಲೀಕನಾಗಲಿ ಅದರ ಬಗ್ಗೆ ಗಮನವನ್ನೇ ಕೊಟ್ಟಿರಲಿಲ್ಲ. ಯಾವುದೇ ಕ್ರಾಂತಿಯ ಬೆಂಕಿ ನಿಧ-ನಿಧಾನವಾಗಿ ಹೊತ್ತಿಕೊಂಡು ಕ್ರಮೇಣ ವೇಗ ಪಡೆಯುವಂತೆ, ಕೋಳಿಗಳ ಆ ಘರ್ಷಣೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತ, ಕ್ರಮಕ್ರಮೇಣ ಇನ್ನೂ ವೇಗಕ್ಕಿಟ್ಟುಕೊಂಡದ್ದು ಅಂದು ಮಾತ್ರ ಅವರೆಲ್ಲರ ಗಮನಕ್ಕೆ ಬಂದಿತ್ತು. ಪಂಜರದ ಬಂಧನದಲ್ಲಿದ್ದರೂ ಅವು ನಡೆಸಿರುವ ಗದ್ದಲ ನೋಡಿ, 'ಇವು ಏನೋ ಅಪಾಯ ತರುವಂತಿವೆ' ಎಂದು ಭಾವಿಸಿದ ಧರ್ಮಪ್ರಸಾದನಿಗೆ ಅದರ ಹಿಂದಿನ ಮಜಕೂರ ತಿಳಿಯುವ ಕುತೂಹಲ ಹೆಚ್ಚಾಯಿತು. ಅವನು ನೋಡುತ್ತ ನಿಂತಿರುವಂತೆಯೇ ಇನ್ನೂ ಒಂದು ಹೊಸ ವರ್ತನೆ ಕೋಳಿಗಳಲ್ಲಿ ಕಾಣತೊಡಗಿತು! ಪ್ರತಿಯೊಂದೂ ಪಂಜರದಲ್ಲಿ ತೀರ ಹಿಂದೆ ಇದ್ದ ಕೋಳಿಗಳು ತಮ್ಮ ಮುಂದಿನ ಕೋಳಿಗಳನ್ನು 'ನೀನು ಮೊದಲು ಹೋಗು' ಎನ್ನುವಂತೆ ಮುಂದೆ ಮುಂದೆ ತಳ್ಳತೊಡಗಿದ್ದವು! ಹಾಗೆ ಮಾಡುವಾಗ ಪ್ರತಿಯೊಂದು ಕೋಳಿಯೂ ತನ್ನ ಶಕ್ತಿಯನ್ನೆಲ್ಲ ಸಂಚಯಿಸಿ, ಮುಂದೆ